ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ.

**ಸಿ.ಸಿ.ನಂ.:1132/2023**

| | |
|---|---|
| ದೂರುದಾರರು | ರಾಜ್ಯದ ಪರವಾಗಿ ಆರಕ್ಷಕ ನಿರೀಕ್ಷಕರು, ಸಂಚಾರ ಪೊಲೀಸ್ ಠಾಣೆ, ಹೊಸಪೇಟೆ, ವಿಜಯನಗರ ಜಿಲ್ಲೆ. |

- ವಿರುದ್ಧ -

| | |
|---|---|
| ಆಪಾಧಿತ - | 3. ಅಜಯ್ ರೆಡ್ಡಿ ತಂದೆ ವೆಂಕಟರೆಡ್ಡಿ, ವಯಸ್ಸು 32 ವರ್ಷ, ವಾಸಃ 17 ನೇ ವಾರ್ಡ, ರಾಘವೇಂದ್ರ ಕಾಲೋನಿ, 2 ನೇ ಸ್ಟೇಜ್, ದತ್ತ ಶಾಲೆಯ ಹತ್ತಿರ, ಬಳ್ಳಾರಿ. |

# ಆಪಾದನೆ

ದಿನಾಂಕಃ 15.08.2023 ರಂದು ಬೆಳಿಗ್ಗೆ 11-30 ಗಂಟೆ ಸುಮಾರಿಗೆ ಸಾಕ್ಷಿ-3 ರವರು ಹೊಸಪೇಟೆ ನಗರದ ಎನ್.ಹೆಚ್-50 ರಸ್ತೆಯಲ್ಲಿ ಶ್ರೀ ಶನೇಶ್ವರ ಗುಡಿ ಹತ್ತಿರ ಇರುವ ಆರ್.ಟಿ.ಓ. ಚೆಕ್ ಪೋಸ್ಟ್ ಹತ್ತಿರ ಮೋಟಾರ್ ಸೈಕಲ್ ನಲ್ಲಿ ಹೋಗುತ್ತಿರುವಾಗ, ಅದೇ ಸಮಯದಲ್ಲಿ ಸಾಕ್ಷಿ-3 ರವರ ಹಿಂದುಗಡೆಯಿಂದ ಶ್ರೀ ಶನೇಶ್ವರ ಗುಡಿ ಕಡೆಯಿಂದ ಆರೋಪಿ-2 ರವರು ಇನೋವಾ ಕಾರ್ ನಂಃಕೆಎ-37 ಎನ್-7789 ನೇದ್ದನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ಸಾಕ್ಷಿ-3 ರವರ ಮೋಟಾರ ಸೈಕಲ್ ಗೆ ಓವರ್ ಟೇಕ್ ಮಾಡಿಕೊಂಡು ಮುಂದುಗಡೆ ಹೋಗಿದ್ದು, ಆದೇ ಸಮಯದಲ್ಲಿ ಸಾಕ್ಷಿ-3 ರವರ ಹಿಂದುಗಡೆಯಿಂದ ಆರೋಪಿ-1 ರವರು ಯಮಹ ಮೋಟಾರ್ ಸೈಕಲ್ ಸಂಃ ಕೆಎ-36 ಇ-6943 ಚಾಸಿ ಸಂಃ 1L1428553 ಇಂಜಿನ್ ನಂಃ1L1428553 ನೇದ್ದರ ಹಿಂಬದಿಯಲ್ಲಿ ಸಾಕ್ಷಿ-2 ರವರನ್ನು ಕೂಡಿಸಿಕೊಂಡು ಮೋಟಾರ್ ಸೈಕಲ್ ನ್ನು ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೊಸಪೇಟೆ ನಗರದ ಎನ್.ಹೆಚ್-50 ರಸ್ತೆಯಲ್ಲಿ ಆರ್.ಟಿ.ಓ. ಚೆಕ್ ಪೋಸ್ಟ್ ಹತ್ತಿರ ಇರುವ ಓವರ್ ಹೆಡ್ ವಾಟರ್ ಟ್ಯಾಂಕ್ ಹತ್ತಿರ ಹೋಗುತ್ತಿರುವಾಗ, ಅದೇ ಸಮಯದಲ್ಲಿ ಅವರ ಮುಂದುಗಡೆ ವೇಗವಾಗಿ ಹೋಗುತ್ತಿದ್ದ ಆರೋಪಿ-2 ರವರು ತನ್ನ ಮುಂದುಗಡೆ ಏಕಾಏಕಿ ಯಾವುದೋ ನಾಯಿ ರಸ್ತೆಯಲ್ಲಿ ಅಡ್ಡ ಬಂದಿದ್ದರಿಂದ ಏಕಾಏಕಿ ಆರೋಪಿ-2 ರವರು ನಿರ್ಲಕ್ಷ್ಯತನದಿಂದ ತಮ್ಮ ಕಾರಿನ ಬ್ರೇಕ್ ಹಾಕಿ ನಿಲ್ಲಿಸಿದ್ದರಿಂದ, ಅದೇ ಸಮಯದಲ್ಲಿ ನಿಗದಿತ ಅಂತರವನ್ನು ಬಿಡದೇ

ಆರೋಪಿ-1 ರವರು ಮೋಟಾರ್ ಸೈಕಲ್ ನ್ನು ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ ಆರೋಪಿ-2 ರವರು ನಿಲ್ಲಿಸಿದ್ದ ಕಾರಿನ ಹಿಂಭಾಗಕ್ಕೆ ರಭಸವಾಗಿ ಡಿಕ್ಕಿ ಪಡಿಸಿ ಅಪಘಾತವನ್ನುಂಟು ಮಾಡಿದ್ದು, ಸದರಿ ಅಪಘಾತದ ಸಮಯದಲ್ಲಿ ಆರೋಪಿಯಾದ ನೀನು ಯಮಹ ಮೋಟಾರ್ ಸೈಕಲ್ ಸಂಃ ಕೆಎ-36 ಇ-6943 ಚಾಸಿ ಸಂಃ 1L1428553 ಇಂಜಿನ್ ನಂಃ1L1428553 ನೇದ್ದರ ನೊಂದಾಯಿತ ಮಾಲೀಕನಾಗಿದ್ದು, ಆರೋಪಿ-1 ರವರಿಗೆ ಸದರಿ ವಾಹನ ಚಲಾಯಿಸಲು ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿದಿದ್ದರೂ ಸಹ ಅದನ್ನು ಚಲಾಯಿಸಲು ಆರೋಪಿ-1 ರವರಿಗೆ ನೀಡಿದ್ದು, ಆ ಮೂಲಕ ಆರೋಪಿಯಾದ ನೀನು ಕಲಂ **5** ಸಹ ಕಲಂ **180** ಐಎಂವಿ ಕಾಯ್ದೆ ಯ ಅಡಿಯಲ್ಲಿ ಅಪರಾಧ ಮಾಡಿರುತ್ತೀಯಾ ಎಂದು ಆರೋಪ ಮಾಡಲಾಗಿದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸದರಿ ಅಪಘಾತದ ಸಮಯದಲ್ಲಿ ಯಮಹ ಮೋಟಾರ್ ಸೈಕಲ್ ಸಂಃ ಕೆಎ-36 ಇ-6943 ಚಾಸಿ ಸಂಃ 1L1428553 ಇಂಜಿನ್ ನಂಃ1L1428553 ನೇದ್ದರ ನೊಂದಾಯಿತ ಮಾಲೀಕನಾಗಿದ್ದು, ಸದರಿ ಮೋಟಾರ್ ಸೈಕಲ್ ಗೆ ನಂಬರ್ ಪ್ಲೇಟ್ ಹಾಕಿಸದೇ, ಸದರಿ ಮೋಟಾರ್ ಸೈಕಲ್ ನ್ನು ಚಲಾಯಿಸಲು ಆರೋಪಿ-1 ರವರಿಗೆ ನೀಡಿದ್ದು, ಆ ಮೂಲಕ ಆರೋಪಿಯಾದ ನೀನು ಕಲಂ **177** ಐಎಂವಿ ಕಾಯ್ದೆ ಯ ಅಡಿಯಲ್ಲಿ ಅಪರಾಧ ಮಾಡಿರುತ್ತೀಯಾ ಎಂದು ಆರೋಪ ಮಾಡಲಾಗಿದೆ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸದರಿ ಅಪಘಾತದ ಸಮಯದಲ್ಲಿ ಯಮಹ ಮೋಟಾರ್ ಸೈಕಲ್ ಸಂಃ ಕೆಎ-36 ಇ-6943 ಚಾಸಿ ಸಂಃ 1L1428553 ಇಂಜಿನ್ ನಂಃ1L1428553 ನೇದ್ದರ ನೊಂದಾಯಿತ ಮಾಲೀಕನಾಗಿದ್ದು, ಸದರಿ ಮೋಟಾರ್ ಸೈಕಲ್ ನ ಫಿಟ್ ನೆಸ್ ಅವಧಿ ಮುಗಿದಿದ್ದರೂ ನವೀಕರಿಸದೇ, ಸದರಿ ಮೋಟಾರ್ ಸೈಕಲ್ ನ್ನು ಚಲಾಯಿಸಲು ಆರೋಪಿ-1 ರವರಿಗೆ ನೀಡಿದ್ದು, ಆ ಮೂಲಕ ಆರೋಪಿಯಾದ ನೀನು

ಕಲಂ **192** ಐಎಂವಿ ಕಾಯ್ದೆ ಯ ಅಡಿಯಲ್ಲಿ ಅಪರಾಧ ಮಾಡಿರುತ್ತೀಯಾ ಎಂದು ಆರೋಪ ಮಾಡಲಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸದರಿ ಅಪಘಾತದ ಸಮಯದಲ್ಲಿ ಯಮಹ ಮೋಟಾರ್ ಸೈಕಲ್ ಸಂಃ ಕೆಎ-36 ಇ-6943 ಚಾಸಿ ಸಂಃ 1L1428553 ಇಂಜಿನ್ ನಂಃ1L1428553 ನೇದ್ದರ ನೊಂದಾಯಿತ ಮಾಲೀಕನಾಗಿದ್ದು, ಸದರಿ ವಾಹನಕ್ಕೆ ವಿಮೆ ಮಾಡಿಸದೇ ನಿನ್ನ ವಾಹನವನ್ನು ರಸ್ತೆಯ ಮೇಲೆ ಚಲಾಯಿಸಲು ಆರೋಪಿ-1 ರವರಿಗೆ ನೀಡಿದ್ದು, ಆ ಮೂಲಕ ಆರೋಪಿಯಾದ ನೀನು ಕಲಂ **146** ಸಹ ಕಲಂ **196** ಐಎಂವಿ ಕಾಯ್ದೆ ಯ ಅಡಿಯಲ್ಲಿ ಅಪರಾಧ ಮಾಡಿರುತ್ತೀಯಾ ಎಂದು ಆರೋಪ ಮಾಡಲಾಗಿದೆ.

ಪ್ರಶ್ನೆ - 1. ನೀನು ಮೇಲೆ ಹೇಳಿರುವ ಆಪಾಧನೆಯನ್ನು ಅರ್ಥ ಮಾಡಿಕೊಂಡಿದ್ದೀಯಾ?

ಉತ್ತರ- ಆ-

ಪ್ರಶ್ನೆ - 2. ನೀನು ಆಪಾದನೆಯನ್ನು ಒಪ್ಪಿಕೊಳ್ಳುತ್ತೀಯಾ ಅಥವಾ ನಿನ್ನ ಪರವಾಗಿ ಪ್ರತಿರಕ್ಷಣೆ ಇದೆಯಾ?

ಉತ್ತರ- ಆ-

(ಆಪಾದಿತನ ಹೇಳಿಕೆಯನ್ನು ನನ್ನ ಸಮ್ಮುಖದಲ್ಲಿ ಪಡೆದುಕೊಂಡಿದ್ದು, ಸದರಿ ಹೇಳಿಕೆಯು ಆಪಾಧಿತನ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಯನ್ನು ಒಳಗೊಂಡಿರುತ್ತದೆ.)

ದಿಃ 27.12.2023.

ಅಪರ ಸಿವಿಲ್ ನ್ಯಾಯಾಧೀಶರು,<br>ಮತ್ತು ಪ್ರ.ದ.ನ್ಯಾದಂ. ಹೊಸಪೇಟೆ.